**ಓ ಎಸ್ 9/2021 ಡಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 03.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎಸ್ ಎಂ ಜಿ ವಕೀಲರಿಂದಃ**

ಈಗ ನನಗೆ ತೋರಿಸಿದ ದಾಖಲೆಯ ಅನುಸಾರ ವೆಂಕಟಮ್ಮ ಎಂಬುವವರು ನಮ್ಮ ತಂದೆಯ ವಿರುದ್ಧ ಪಾಂಡವಪುರ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನಮ್ಮ ತಂದೆಯ ದರಖಾಸ್ತು ಮಂಜೂರಾತಿಯ ರದ್ದು ಕೋರಿ ಆರ್ ಎ 46/1996-97 ನ್ನು ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ಒಪ್ಪಿದ್ದರಿಂದ ನಿಶಾನೆ ಡಿ 27 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ತನ್ನ ತಂದೆಗೆ ಮಂಜೂರಾಗಿದ್ದ ಗ್ರಾಂಟ್ ಸರ್ಟೀಫಿಕೇಟ್ ಸಂಖ್ಯೆ ಹಾಗೂ ವರ್ಷ ಮತ್ತು ಅಪೀಲುದಾರರ ಗಂಡನಿಗೆ ಮಂಜೂರಾಗಿದ್ದ ಗ್ರ್ಯಾಂಟ್ ಸರ್ಟೀಫಿಕೇಟ್ ಸಂಖ್ಯೆ ಹಾಗೂ ವರ್ಷ ಬೇರೆ ಬೇರೆಯಾಗಿದೆ ಮತ್ತು ಈ ದಾಖಲೆಯನ್ನು ಈಗಾಗಲೇ ಅಮಲ್ಜಾರಿ ಅರ್ಜಿಯಲ್ಲಿ ಹಾಜರುಪಡಿಸಿ ಅದು ವಜಾಗೊಂಡಿದೆ ಎಂದು ಹೇಳುತ್ತಾರೆ. ನಿಶಾನೆ ಡಿ 19 ರಲ್ಲಿರುವ ಸಾಗುವಳಿ ಚೀಟಿಯನ್ನು ನಿಶಾನೆ ಡಿ 27 ರಲ್ಲಿನ ಆದೇಶದ ಮೂಲಕ ಪಾಂಡವಪುರ ಉಪ ವಿಭಾಗಾಧಿಕಾರಿಗಳು ರದ್ದು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಶಾನೆ ಡಿ 27 ರ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಮಂಜೂರಾಗಿರುವ ಮೂಲ ಗ್ರ್ಯಾಂಟ್ ಸರ್ಟೀಫಿಕೇಟ್ ಹಾಗೂ ಆರ್ ಟಿ ಸಿ ಯನ್ನು ಗಮನದಲ್ಲಿಟ್ಟುಕೊಂಡು ನಾನು ಹೇಳುತ್ತಿದ್ದೇನೆ. ನಿಶಾನೆ ಡಿ 19 ರಲ್ಲಿರುವ 0.24 ಗುಂಟೆ ಜಮೀನು ನಮ್ಮ ಮಾಲೀಕತ್ವದಲ್ಲಾಗಲೀ ಅಥವಾ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿಲ್ಲ ಎಂದರೆ ಸರಿಯಲ್ಲ.

ದಾವಾನುಸೂಚಿ 1 ನೇ ಐಟಂ ಸ್ವತ್ತಿನ 0.31 ಗುಂಟೆ ಪೈಕಿ 0.24 ಗುಂಟೆ ಜಮೀನನ್ನು ಮುನಿಸಿಪಾಲಿಟಿಯವರು ಭೂಸ್ವಾಧೀನಪಡಿಸಿಕೊಂಡಿದ್ದಾರೆ ಎಂದು

156 ಹೇಳಿ ವಾದಿ ಮತ್ತು 6 ನೇ ಪ್ರತಿವಾದಿ ತಕರಾರು ತೆಗೆದಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ತಕರಾರು ವಜಾ ಗೊಂಡಿದೆ ಎಂದು ಹೇಳುತ್ತಾರೆ. ಯಾವ ಕಾರಣಕ್ಕೆ ಸದರಿ ತಕರಾರು ವಜಾಗೊಂಡಿದೆ ಎಂದು ನಾನು ಆದೇಶದ ಪ್ರತಿಯನ್ನು ಓದಿ ತಿಳಿದುಕೊಂಡಿಲ್ಲ.

ಭೂಸ್ವಾಧೀನವಾಗಿರುವ ಜಮೀನು ಸಣ್ಣಮ್ಮರವರಿಗೆ ಸೇರಿದ ಜಮೀನಾಗಿದೆಯೇ ಹೊರತು ಸಿ ಕೆ ದೇವೇಗೌಡರಿಗೆ ಸೇರಿದ ಜಮೀನಾಗಿರುವುದಿಲ್ಲ ಎಂದು ಪಾಂಡವಪುರ ತಹಶೀಲ್ದಾರರು ದಿನಾಂಕ 28.07.2025 ರಂದು ಪಾಂಡವಪುರ ಉಪ ವಿಭಾಗಾಧಿಕಾರಿಗಳಿಗೆ ಈಗ ನನಗೆ ತೋರಿಸಿದ ದಾಖಲೆ ರೀತ್ಯಾ ವರದಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಭೂಸ್ವಾಧೀನವಾಗಿರುವ ಜಮೀನು ಸಣ್ಣಮ್ಮರವರಿಗೆ ಸೇರಿದ ಜಮೀನಾಗಿದೆಯೇ ಹೊರತು ಸಿ ಕೆ ದೇವೇಗೌಡರಿಗೆ ಸೇರಿದ ಜಮೀನಾಗಿರುವುದಿಲ್ಲ ಎಂದು ಪಾಂಡವಪುರ ಉಪ ವಿಭಾಗಾಧಿಕಾರಿಗಳು ದಿನಾಂಕ 05.08.2025 ರಂದು ಈಗ ನನಗೆ ತೋರಿಸಿದ ದಾಖಲೆ ರೀತ್ಯಾ ಘನ ಲೋಕಾಯುಕ್ತರವರಿಗೆ ವರದಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲೋಕಾಯುಕ್ತ ಪ್ರಕರಣವು ಈಗಲೂ ಸಹ ವಿಚಾರಣಾ ಹಂತದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದಲೇ ದಾವಾ ಅನುಸೂಚಿ ಐಟಂ ನಂ.1 ರಲ್ಲಿ ಭೂಸ್ವಾಧೀನಗೊಂಡಿರುವ ಜಮೀನಿಗೆ ಸಂಬಂಧಿಸಿದ ಪರಿಹಾರದ ಹಣವನ್ನು ವಿತರಣೆ ಮಾಡದಂತೆ ತಡೆ ಹಿಡಿಯಲಾಗಿದೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಐಟಂ ನಂ.1 ರ ಸ್ವತ್ತು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲ. ದಾವಾ ಅನುಸೂಚಿ ಐಟಂ ನಂ.1 ರ ಸ್ವತ್ತು ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿತ್ತೋ ಅಥವಾ ಇಲ್ಲವೋ ಅಥವಾ ವಾದಿ ಮತ್ತು ಪ್ರತಿವಾದಿಗಳ ಪೈಕಿ ಯಾರ ಸ್ವಾಧೀನದಲ್ಲಿ ಆ ಸ್ವತ್ತು ಇದೆ ಅಥವಾ ಎಲ್ಲರ ಜಂಟಿ ಸ್ವಾಧೀನದಲ್ಲಿ ಇದೆಯೋ ಎಂದು ತಿಳಿದುಕೊಳ್ಳಲು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ

ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳಲು ನನ್ನ ಅಭ್ಯಂತರವೇನಾದರೂ ಇದೆಯಾ ಎಂದರೆ ಈ ಹಂತದಲ್ಲಿ ನ್ಯಾಯಾಲಯದ ನಿಯೋಗಿಯ ನೇಮಕಕ್ಕೆ ನನ್ನ ತಕರಾರು ಇದೆ. ಸರ್ವೆ ನಂ. 75/4 ರಲ್ಲಿ 0.41 ಗುಂಟೆ ಜಮೀನು, 72/1 ರಲ್ಲಿ 0.31 ಗುಂಟೆ, 72/1 ರಲ್ಲಿ 0.06 ಗುಂಟೆ ಜಮೀನು ಮತ್ತು ಪಾಂಡವಪುರದ ಚಿಕ್ಕಮಸೀದಿ ರಸ್ತೆಯಲ್ಲಿ ಒಂದು ಮನೆ. ಈ ಎಲ್ಲಾ ಆಸ್ತಿಗಳು ಇರುವ ಕಾರಣ ನ್ಯಾಯಾಲಯದ ನಿಯೋಗಿಯ ನೇಮಕಕ್ಕೆ ನನ್ನ ತಕರಾರು ಇದೆ. ಈ ಮೇಲ್ಕಂಡ ಎಲ್ಲಾ ಆಸ್ತಿಗಳು ದಾವಾ ಆಸ್ತಿಗಳಾಗಿವೆ ಎಂದರೆ ಸರಿ. ನ್ಯಾಯಾಲಯದ ನಿಯೋಗಿಯು ಸ್ಥಳಕ್ಕೆ ಭೇಟಿ ನೀಡಿ ವಾಸ್ತವ ಸಂಗತಿಗಳನ್ನು ನ್ಯಾಯಾಲಯಕ್ಕೆ ವರದಿ ಮಾಡಿದರೆ ನಮಗೆ ಅನಾನುಕೂಲವಾಗುತ್ತದೆ ಎಂಬ ಕಾರಣದಿಂದ ನಾನು ಸುಳ್ಳು ಆಕ್ಷೇಪಣೆಗಳನ್ನು ತೆಗೆಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.1 ರ ಮೇಲೆ ನನಗೆ ಯಾವುದೇ ಹಕ್ಕು ಬಾಧ್ಯತೆಗಳು ಪ್ರತ್ಯೇಕವಾಗಿ ಇಲ್ಲದೆ ಇದ್ದರೂ ಸಹ ಪರಿಹಾರದ ಹಣವನ್ನು ಪಡೆದುಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ 5 ರ ಪ್ರಕಾರ ನಡೆದುಕೊಳ್ಳಲು ನಾವು ಬದ್ದರಾಗಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಮಾಹಿತಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**